ಎಂ.ವಿ.ಸಿಃ 1114/2024
ಪಿ.ಡಬ್ಲ್ಯೂ : 02

ದಿನಾಂಕ 22-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರವರಿಂದಃ

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾ . ಹರೀಶ್ ಆರ್ ನಾಯಕ್ |
| ತಂದೆಯ ಹೆಸರು | : | ರಾಮರಾಯ ನಾಯಕ್ |
| ವಯಸ್ಸು | : | 48 |
| ಉದ್ಯೋಗ | : | ಆರ್ಥೋಪೆಡಿಕ್, ಸಿಟಿ ಆಸ್ಪತ್ರೆ , ಉಡುಪಿ |
| ವಾಸಸ್ಥಳ | : | ಉಡುಪಿ |

ನಾನು ಹರೀಶ್ ಆಚಾರ್ಯ ರವರಿಗೆ ಚಿಕಿತ್ಸೆ ನೀಡಿರುತ್ತೇನೆ . ಅವರು ನಮ್ಮ ಆಸ್ಪತ್ರೆ ಯಲ್ಲಿ 4 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾರೆ. ಅರ್ಜಿದಾರರಿಗೆ ಆದ ಗಾಯಗಳಿಂದ ಅವರಿಗೆ ಓಡಾಡಲು 6 ತಿಂಗಳು ಆಗಲಿಲ್ಲ .

ನಾನು ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿಪಿ-11 | Admission records |
| ನಿಪಿ-12 | ಎಕ್ಸ್ ರೇ |
| ನಿಪಿ-13 | ಫೋಟೋ |

ಪಾಟೀ ಸವಾಲುಃ **2** ನೇ ಎದುರುದಾರ ಪರ ವಕೀಲರಿಂದಃ

ಅರ್ಜಿದಾರರಿಗೆ ಪ್ರಾಥಮಿಕ ಚಿಕಿತ್ಸೆಯನ್ನು ನಾನೇ ನೀಡಿರುತ್ತೇನೆ . ಅರ್ಜಿದಾರರಿಗೆ ನಾನು ಶಸ್ತ್ರ ಚಿಕಿತ್ಸೆ ಮಾಡಿ plaster paris ಹಾಕಿರುತ್ತೇನೆ. ಅರ್ಜಿದಾರರಿಗೆ ಸಂಪೂರ್ಣ ಚಿಕಿತ್ಸೆ ಮುಗಿದ ನಂತರವೇ ಬಿಡುಗಡೆ ಮಾಡಿರುತ್ತೇವೆ ಎಂದರೆ ಸರಿ. ಅರ್ಜಿದಾರರಿಗೆ ಅಂಗನ್ಯೂನ್ಯತೆ ಇಲ್ಲ. ಅರ್ಜಿದಾರರಿಗೆ ಅದ ಗಾಯಗಳು ಸಂಪೂರ್ಣ ಗುಣಮುಖವಾಗಿದೆ ಎಂದರೆ ಸರಿ . ಅರ್ಜಿದಾರರು

ಅಪಘಾತದ ಸಮಯದಲ್ಲಿ ಚಿನ್ನ ಬೆಳ್ಳಿಯ ಕೆಲಸ ಮಾಡುತಿದ್ದರು. ಈಗ ಅವರು ಮೊದಲು ಮಾಡುತಿದ್ದ ಕೆಲಸ ಮಾಡಲು ತೊಂದರೆ ಇಲ್ಲ . ಅರ್ಜಿದಾರರಿಗೆ ಪರಿಹಾರ ಸಿಗಲಿ ಎಂದು ಅಪಘಾತವಾದ ನಂತರ ಅವರು 6 ತಿಂಗಳ ಕಾಲ ನಡೆದಾಡಲು ಆಗಲಿಲ್ಲ ಮತ್ತು ಆ ಸಮಯದಲ್ಲಿ ಯಾವುದೇ ಕೆಲಸ ಮಾಡಲು ಆಗಲಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ**.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ. ಉಡುಪಿ.